
## ಪದಬಂಧ



**ಎಡದಿಂದ ಬಲಕ್ಕೆ**

1. ಅವರಿವರ ಮಧ್ಯದಲ್ಲೇ ಒಬ್ಬ ನೀಚ ಮನುಷ್ಯನೂ ಇದ್ದಾನೆ 3
3. ಸಂಚಕಾರಕ್ಕೆ ಒಳಗಾದದ್ದನ್ನು ಹೇಳಿಕೊಳ್ಳಲೂ ನಾಚಿಕೆಯೇ? 3
4. ದೇವರ ಕೆಲಸಕ್ಕೆಂದು ತಂದದ್ದರಲ್ಲಿ ಈ ಕರಗಿಸುವ ವಸ್ತುವೂ ಒಂದು 3
6. ಲಕ್ಷ ಲಕ್ಷ ತಂದವರನ್ನು ಗೌರವದಿಂದ ಗಮನಿಸು 3
7. ಯಾರದ್ದೋ ಹಣವನ್ನು ಬಳಸಿ ಆತ ಮೇಲೇರಿದನೇ? 4
9. ಗಜರಾಜನನ್ನೇ ಹೆದರಿಸಿತಲ್ಲ, ಅದೆಂಥ ದೈತ್ಯ ಸರ್ಪ! 4
11. ಕಂಡಕಂಡವರ ಕೈಯಲ್ಲೂ ಒಂದು ಸುಂದರ ಭರಣಿ 4
13. ಆ ನಾರಿಯ ತಮ್ಮ ಒಬ್ಬ ಶ್ರೇಷ್ಠ ಮನುಷ್ಯ 4
15. ಭಾಷಾ ಪರಿಣಿತಿಗೆ ಕಾರಣನಾದ ಪ್ರಸಿದ್ಧ ವ್ಯಾಕರಣಕಾರ 3
17. ಈಶ್ವರನ ಕಣ್ಣು ಎಂಬಂಥ ಪವಿತ್ರ ಮಣಿ 3
18. ಅಂದು ಹುತಾತ್ಮರಾದವರಲ್ಲಿ ಒಬ್ಬ ಕುದುರೆ ಸವಾರನೂ ಇದ್ದಾನೆ 3
19. ಕೊರಳು ಕುಯ್ದು ಕೊಂದ ಕೃತ್ಯ ತೀರ ಭಯಂಕರ 3

**ಮೇಲಿನಿಂದ ಕೆಳಕ್ಕೆ**

1. ಹಿಮಾಚಲದಲ್ಲಿ ಕಿಂಚಿತ್ತೂ ಅಲುಗಾಡದ್ದು ಗೊತ್ತೇ? 3
2. ಸಮುದ್ರವನ್ನೇ ನೆನಪಿಸುವ ಹಳೆ ಹೆಸರಿನ ಮಹಾನಗರ ಈಗ ಚೆನ್ನಾಗಿದೆ 4
3. ಈ ಹೆಜ್ಜೆ ಗುರುತು ಸಿಂಹದ್ದೇ ಹೌದೇ ಎಂಬುದೇ ಅನುಮಾನ 3
5. ಕಾಜಾಣ ಹಕ್ಕಿಯ ಗೂಡಿನ ಬಳಿ ಯಾವುದೀ ಕುಟುಕುವ ಕೀಟ? 3
7. ಅಧ್ವಾನಗಳಿಗೆ ಕಾರಣವಾದದ್ದು ಈಗ ಹೊಸದಾಗಿದೆ! 4
8. ಕಂಡವರ ಹಣ ಕಸಿಯುವುದರ ಮೇಲಿದ್ದ ನಿಯಂತ್ರಣ ಈಗ ಹಿಂದುಮುಂದಾಗಿದೆ 4
9. ವಿಮಾನ ಹತ್ತಿಸುತ್ತೇನೆಂದು ಕರೆದೊಯ್ದು ಮರ್ಯಾದೆ ಹೋಗಿಸಿದ 4
10. ಮರದಿಂದಲೇ ನಿರ್ಮಿಸಿದ್ದಾದರೂ ಎಂಥ ಸುಂದರ ಮನೆ ನೋಡಿ 4
12. ಮುರುಡೇಶ್ವರ ತಲುಪಿದೊಡನೆ ಎಲ್ಲೆಲ್ಲೂ ಕಂಡೀತೇ ಈಶ್ವರನ ವಾದ್ಯ? 3
14. ಹತ್ತಾರು ದೃಶ್ಯಗಳ ನಡುವೆ ಎದ್ದು ಕಾಣುವಂತಿದೆ ಬೆಳಕಿನ ಸಪ್ತವರ್ಣಗಳ ಪಟ್ಟಿ? 3
15. ಪಕ್ಷಿ ರಕ್ಷಣೆ ಕುರಿತ ಕಾರ್ಯಕ್ರಮ ಹದಿನೈದು ದಿನಗಳಿಗೊಮ್ಮೆ 3
16. ಅಲ್ಲಿ ನೀರಿನ ಆಳ ಬಹಳ ಕಡಿಮೆ ಎಂದು ತಿಳಿದ ನಂತರ ಸಿಕ್ಕಿತು ನೆಮ್ಮದಿ 3

### 19—06—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಅನುಗ್ರಹ 3. ಸಮಗ್ರ 4. ಸಿಡುಕ 6. ಜಹಾಂಗೀರು 7. ವೇತನ 9. ಹುಲುಸು 11. ದಹಿಸು 13. ಸುಮುಖ 15. ಬಿಡಿವಾರ 17. ದುರುಳ 18. ಗಡಸು 19. ಸುರಿಮಳೆ

**ಮೇಲಿನಿಂದ ಕೆಳಕ್ಕೆ**

1. ಅಗ್ರಜ 2. ಹಸಿರು 3. ಸಹಿತ 5. ಕಡಲು 7. ವೇಣುನಾದ 8. ನಮೂದಿಸು 9. ಹುಡುಕಿಸು 10. ಸುಖದುಃಖ 12. ಹಿರಿದು 14. ಮುನಿಸು 15. ಬಳಸು 16. ರಗಳೆ

ಪ್ರಶ್ನಾಂಕಣ


# ಕಡಲ ಕುದುರೆಗಳ ಕಗ್ಗೊಲೆ ಏಕೆ?

ಕಡಲ ಕುದುರೆ (ಸೀ ಹಾರ್ಸ್). ವಾಸ್ತವವಾಗಿ ಅದೊಂದು ಬಗೆಯ ಕಡಲವಾಸಿ ಮೀನು. ಕುದುರೆಯ ತಲೆಯನ್ನೇ ಹೋಲುವ ತಲೆಯ ಆಕಾರದಿಂದಾಗಿ ಅದಕ್ಕೆ ಕಡಲ ಕುದುರೆ ಎಂಬ ರೂಪಾನ್ವಯ ಹೆಸರು. ಕಡಲ ಕುದುರೆಗಳಲ್ಲಿ 50 ಪ್ರಭೇದಗಳಿವೆ (ಮೂರು ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ). 1 ರಿಂದ 14 ಅಂಗುಲಗಳವರೆಗಿನ ವಿವಿಧ ಉದ್ದ ಇದ್ದು, ಇತರ ಚಿಕ್ಕಪುಟ್ಟ ಪ್ರಾಣಿಗಳನ್ನು ಬೇಟೆಯಾಡುವ ಈ ಮತ್ಸ್ಯಗಳದು 1ರಿಂದ 5 ವರ್ಷಗಳ ಆಯುಷ್ಯ.

ಬೆಚ್ಚಗಿನ ಪ್ರದೇಶಗಳ ಸಾಗರದಂಚುಗಳಲ್ಲಿ ಸಮೃದ್ಧವಾಗಿ ಬೆಳೆವ ಕಡಲ ಕಳೆಗಳ ಅಡವಿಗಳಲ್ಲಿ ಈ ಮತ್ಸ್ಯಗಳ ವಾಸ. ಕಡಲ ನೀರಲ್ಲಿ ನೇರವಾಗಿ ನಿಂತಂತೆ ಮೇಲಕ್ಕೂ ಕೆಳಕ್ಕೂ ಇವುಗಳ ಈಜಾಟ. ಕಡಲ ಕುದುರೆಗಳ ಗಂಡುಗಳು ತಮ್ಮ ಹೊಟ್ಟೆಯ ಮೇಲೊಂದು ಸಂತಾನ ಚೀಲವನ್ನು ಪಡೆದಿರುತ್ತವೆ. ಸಂತಾನವರ್ಧನೆಯ ಕಾಲದಲ್ಲಿ ಹೆಣ್ಣು ಕಡಲ ಕುದುರೆಗಳು ತಮ್ಮ ಗರ್ಭದಲ್ಲಿ ರೂಪುಗೊಂಡ ಹತ್ತಾರು ಅಥವಾ ನೂರಾರು ಮೊಟ್ಟೆಗಳನ್ನು ಗಂಡುಗಳ ಸಂತಾನ ಚೀಲದೊಳಕ್ಕೆ ಸುರಿದು ತಮ್ಮ ದಾರಿ ಹಿಡಿಯುತ್ತವೆ. ತಮ್ಮ ಸಂತಾನ ಚೀಲದಲ್ಲಿ ಫಲವಂತವಾಗುವ ಮೊಟ್ಟೆಗಳನ್ನು ಅಲ್ಲೇ ಕಾಪಾಡುತ್ತವೆ. 45 ದಿನಗಳಲ್ಲಿ ಪ್ರೌಢವಾಗುವ ಮರಿಗಳು ತಂದೆಯ ಚೀಲದಿಂದ ಗುಂಪಾಗಿ ಹೊರಬಂದು ಸ್ವತಂತ್ರ ಜೀವನ ಆರಂಭಿಸುತ್ತವೆ.

ಕಡಲ ಕುದುರೆಗಳ ದುರಂತ ಏನೆಂದರೆ, ಅವು ಮಾನವರ ಮೂಢನಂಬಿಕೆಗಳಿಗೆ ಭಾರೀ ಪ್ರಮಾಣದಲ್ಲಿ ಬಲಿಯಾಗುತ್ತಿವೆ. ವನ್ಯ ಪ್ರಾಣಿಗಳ ಕಾನೂನು ಬಾಹಿರ ಬೇಟೆ ಮತ್ತು ಕಳ್ಳ ಸಾಗಣೆಯ ದಂಧೆಗೆ ಈ ಮೀನುಗಳೂ ಗುರಿಯಾಗಿವೆ. ಕಡಲಿನಿಂದ ಹಿಡಿದು ತರುವ ಈ ಮತ್ಸ್ಯಗಳನ್ನು ಒಣಗಿಸಿ, ಪೊಟ್ಟಣ ಕಟ್ಟಿ ಚೀನಾ, ಹಾಂಕಾಂಗ್ ಮತ್ತಿತರ ದೂರ ಪ್ರಾಚ್ಯದ ಅನೇಕ ರಾಷ್ಟ್ರಗಳಿಗೆ ಹಾಗೂ ಹಲವಾರು ಯೂರೋಪಿಯನ್ ದೇಶಗಳಿಗೂ ಕಳ್ಳಸಾಗಣೆ ಮಾಡಲಾಗುತ್ತಿದೆ. ಒಂದು ವೈಜ್ಞಾನಿಕ ಶೋಧದ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ವಿಮಾನಗಳ ಮೂಲಕ ಬಂದು ಹೋಗುವ ಪ್ರಯಾಣಿಕರ ಪೆಟ್ಟಿಗೆಗಳಲ್ಲೇ ಐದು ದಶಲಕ್ಷ ಕಡಲ ಕುದುರೆಗಳು ಪತ್ತೆಯಾಗಿವೆ! ಆದರೆ ವಾಸ್ತವವಾಗಿ ಇದರ ಕನಿಷ್ಠ ಹತ್ತು ಮಡಿಯಷ್ಟಾದರೂ ಕಳ್ಳಸಾಗಣೆಗೊಂಡಿವೆ ಎಂದು ತಜ್ಞರು ಅಂದಾಜಿಸಿದ್ದಾರೆ !

ಕಡಲ ಕುದುರೆಗಳ ಪ್ರಧಾನ ಬಳಕೆ ಚೀನೀಯರ ನಾಟಿ ಔಷಧಗಳಲ್ಲಿ ಆಗುತ್ತಿದೆ. ಅಂತಹ ನಾಟಿ ವೈದ್ಯರ ನಂಬಿಕೆಯ ಪ್ರಕಾರ ಸಂತಾನ ಹೀನತೆಗೆ, ಅಂಗಾಂಗ ದೌರ್ಬಲ್ಯಕ್ಕೆ, ಗೂರಲು ರೋಗಕ್ಕೆ, ಸಂಧಿವಾತಕ್ಕೆ, ಬಕ್ಕತನ ನಿವಾರಣೆಗೆ ಇತ್ಯಾದಿ ಹತ್ತಾರು ಕೊರತೆಗಳಿಗೆ ಮತ್ತು ಅನಾರೋಗ್ಯಗಳಿಗೆ ಕಡಲ ಕುದುರೆಗಳು ಅತ್ಯುತ್ತಮ ಔಷಧಗಳಾಗಿವೆ ! ಇಂಥವೆಲ್ಲ ಮೂಢ ನಂಬಿಕೆಗಳೇ ಕಡಲ ಕುದುರೆಗಳ ಕಗ್ಗೊಲೆಗೆ ಕಾರಣ!




■ ಎನ್. ವಾಸುದೇವ್